**<u>ಸಾಕ್ಷಿಯನ್ನು ದಿನಾಂಕಃ 04-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ಶ್ರೀ. ಕೆ.ಜೆ.ಪಿ ವಕೀಲರವರಿಂದಃ</u>**

1. ದಾವಾ ಜಮೀನಿನ ಸರ್ವೆ ನಂಬರು 1/ಪಿ1 ಮತ್ತು ವಿಸ್ತೀರ್ಣ 4 ಎಕರೆ 54 ಸೆಂಸ್ಸ ಇರುತ್ತದೆ. ವಾದಿಗೆ ಹರಪನಹಳ್ಳಿ ತಹಶಿಲ್ದಾರ ಇವರು ರಿವಿಷನ್ ಪಾರಂ ನಂ ಸೀರಿಯಲ್ ನಂ 51 ದಿನಾಂಕ 17.01.1919 ರಂದು ದಾವಾ ಅಸ್ತಿಯನ್ನು ಅಂದರೆ 4 ಎಕರೆ ಜಮೀನನ್ನು ಪಟ್ಟಾ ಮಂಜೂರು ಮಾಡಿರುತ್ತಾರೆ ಅಂದರೆ ಸರಿ. ಆದರೆ ನಾವೆ ಸ್ವಾದೀನದಲ್ಲಿದ್ದು ಸಾಗುವಳಿ ಮಾಡುತ್ತಿದ್ದೇವೆ. ನಾನು ನಿಡಿ 1 ರಂತೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಸಾಗುವಳಿ ಚೀಟಿಯಲ್ಲಿ ಸರ್ವೆ ನಂ 1 ರ ವಿಸ್ತೀರ್ಣ 4 ಎಕರೆ 54 ಸೆಂಸ್ಸ ಎಂದು ನಮೂದು ಇರುವುದು ಅಂದರೆ ಸರಿ. ವಾದಿಗೆ ಹರಪನಹಳ್ಳಿ ತಹಶಿಲ್ದಾರರರು ಮಂಜೂರು ಮಾಡಿರುವ 4 ಎಕರೆ ಜಮೀನು ಮತ್ತು ನಿಡಿ 1 ರಲ್ಲಿ ಕಂಡು ಬರುವ 4 ಎಕರೆ 54 ಸೆಂಸ್ಸ ಜಮೀನು ಇವೆರಡೂ ಬೇರೆ ಬೇರೆ ಆಗಿರುತ್ತವೆ ಅಂದರೆ ಸರಿಯಲ್ಲ.

2. ನಾನು ಪಟ್ಟಾ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದು ಸಕ್ಷಮ ಪ್ರಾಧಿಕಾರದವರು ಸ್ಥಳ ಪರೀಶಿಲನೆ ಮಾಡಿ ನನ್ನ ಹೆಸರಿಗೆ ಪಟ್ಟಾ ಮಂಜೂರು ಮಾಡಿರುವರು. ನಾನು ಪಟ್ಟಾವನ್ನು ಮಂಜೂರು ಮಾಡಿಕೊಂಡಿರುವರೆ ವಾದಿಯೂ ಸಹಿತ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ತನ್ನ ಹೆಸರಿಗೆ ಪಟ್ಟಾ ಮಂಜೂರು ಮಾಡಿಕೊಂಡಿರುವರು ಅಂದರೆ ಸರಿಯಲ್ಲ. ನನಗೆ ನೌಕರಿ ಸಿಕ್ಕಿದ್ದಿದ್ದರೆ ನಾನು ಸರ್ಕಾರಿ ಅದೇಶದಂತೆ ಬೇರೆ ಬೇರೆ ಊರುಗಳಿಗೆ ಹೋಗಿ ನೌಕರಿ ಮಾಡುತ್ತಿದ್ದೆ. ಊರಿನಲ್ಲಿ ಜೀವನ ನಿರ್ವಹಣೆ ಸಾಧ್ಯವಾಗದಿದ್ದರೆ ಬೇರೆ ಊರಿಗೆ ಜೀವನ ನಿರ್ವಹಣೆಗಾಗಿ ಸಹಜವಾಗಿ ಹೋಗಬೇಕಾಗುತ್ತದೆ ಅಂದರೆ ಸರಿ.

3. ವಾದಿಯು ಹರಪನಹಳ್ಳಿ ತಾಲ್ಲೂಕಿನ ಖಾಯಂ ನಿವಾಸಿ ಆಗಿರುವನು ಅಂದರೆ ಸರಿಯಲ್ಲ. ವಾದಿಯು ಹರಪನಹಳ್ಳಿ ನಿವಾಸಿ ಆಗಿರುವುದರಿಂದ ಮತ್ತು ಅತನು ಸಾಗುವಳಿ ಮಾಡುತ್ತಿರುವದನ್ನು ಪರಿಗಣಿಸಿ ಆತನ ಹೆಸರಿಗೆ ದಾವಾ ಸ್ವತ್ತು ಪಟ್ಟಾ ಮಂಜೂರು ಆಗಿರುತ್ತದೆ ಅಂದರೆ ಸರಿಯಲ್ಲ. ವಾದಿ ಕೆಲಸದ ನಿಮಿತ್ತ 1 ವರ್ಷದ ಕಾಲ ಬೇರೆ ಊರಿಗೆ ಹೋದಾಗ ನಾವು ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ಬಿತ್ತನೆ ಮಾಡಲು ಪ್ರಯತ್ನಿ ಪಟ್ಟಿದ್ದೇವೆ ಅಂದರೆ ಸರಿಯಲ್ಲ. ವಾದಿಗೆ ಪಟ್ಟಾ ಮಂಜೂರಾದ ನಂತರ ವಾದಿಯು ದಾವಾ ಸ್ವತ್ತಿಗೆ ತೆರಿಗೆ ಕಟ್ಟುತ್ತಿರುವನು ಮತ್ತು ಸಾಗುವಳಿ ಚೀಟಯನ್ನು ಸರ್ಕಾರಿದಿಂದ ಪಡೆದಿರುವನು ಅಂದರೆ ಸರಿಯಲ್ಲ. ಪಟ್ಟಾ ಮಂಜುರಾದ ದಿನದಿಂದ ಇಲ್ಲಯವರೆಗೂ ವಾದಿಯು ದಾವಾ ಅಸ್ತಿಯ ಸ್ವಾದಿನ ಅನುಭವದಲ್ಲಿ ಇರುವನು ಮತ್ತು ನಾವು ಎಂದಿಗೂ ದಾವಾ ಅಸ್ತಿಯ ಸಾವಧೀನ ಅನುಭವದಲ್ಲಿ ಇರಲಿಲ್ಲ ಮತ್ತು ಈಗಲೂ ಇಲ್ಲ ಅಂದರೆ ಸರಿಯಲ್ಲ. ವಾದಿಯು ದಾವಾ ಅಸ್ತಿಯ

**ಸಾಕ್ಷಿಯ ಸಹಿ**

ಮೇಲೆ ಮಾಲ್ಕಿ ಹಕ್ಕು ಹೊಂದಿರುವುದರಿಂದ ಮತ್ತು ಸ್ವಾಧೀನ ಅನುಭವದಲ್ಲಿ ಇರುದರಿಂದ ತುಂಬಿಕೇರಿ ಕೃಷ್ಟಿ ಪತ್ತಿನ ಸಹಕಾರಿ ಸಂಘವು ಸಾಲವನ್ನು ಮಂಜೂರು ಮಾಡಿರುತ್ತದೆ ಅಂದರೆ ಸರಿಯಲ್ಲ. ದಾವಾ ಅಸ್ತಿಯೇ ಬೇರೆ ಮತ್ತು ನನಗೆ ಪಟ್ಟಾ ಮಂಜೂರು ಆಗಿರುವ ಅಸ್ತಿಯೇ ಬೇರೆ ಅಂದರೆ ಸರಿಯಲ್ಲ.

4. ನಾವು ದಬ್ಬಾಳಿಗೆ ಮಾಡಿ ವಾದಿಯನ್ನು ದಾವಾ ಅಸ್ತಿಯಿಂದ ಹೊರ ಹಾಕಲು ಪ್ರಯತ್ನಿಸುತ್ತಿದ್ದೆವೆ ಮತ್ತು ಅದನ್ನು ನಮ್ಮ ಹೆಸರಿಗೆ ಮಾಡಿಕೊಳ್ಳಲು ಪ್ರಯತ್ನಿ ಪಡುತ್ತಿದ್ದೆವೆ ಅಂದರೆ ಸರಿಯಲ್ಲ. ದಾವಾ ಅಸ್ತಿರ್ಯ ಸರ್ವೆ ನಂ 1/1 ಪಿ1 ಇದ್ದು ನನ್ನ ಹೆಸರಿಗೆ ಪಟ್ಟಾ ಮಂಜೂರು ಆಗಿರುವ ಜಮೀನಿನ ಸರ್ವೆ ನಂ 1 ಇರುತ್ತದೆ ಅಂದರೆ ಸರಿಯಲ್ಲ. ನಾನು ದಿನಾಂಕ 28.03.2018 ರಂದು ದಾವಾ ಅಸ್ತಿಗೆ ಅಕ್ರಮ ಪ್ರವೇಶ ಮಾಡಿದ್ದೇನೆ ಅಂದರೆ ಸರಿಯಲ್ಲ. ಆ ವಿಚಾರವಾಗಿ ಊರಿನ ಹಿರಿಯರು ನನಗೆ ತಿಳುವಳಿಕೆ ನೀಡಿರುವರು ಅಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

04-09-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ**